**ಅಮಲ್ಜಾರಿ ಸಂಖ್ಯೆ : 3/2019**

**ಪಿ. ಡಬ್ಲ್ಯೂ : 1**

**ದಿಃ 4.11.2023  ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಡಿಕ್ರಿದಾರರ ಪರ ಶ್ರೀ ಎಸ್ ಎಸ್ ಆರ್  ವಕೀಲರಿಂದ**

**ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಸದರಿ ಪ್ರಮಾಣ ಪತ್ರಿಕೆಯನ್ನು ನನ್ನ ಮುಖ್ಯ ವಿಚಾರಣೆ ಎಂದು ತೆಗೆದುಕೊಳ್ಳಬೇಕು ಎಂದು ಕೋರುತ್ತೇನೆ.**

ಡಿಕ್ರಿದಾರರು ನನಗೆ ಬರೆದುಕೊಟ್ಟ ಜಿ ಪಿ ಎ ಯನ್ನು ಕೊಟ್ಟಿದ್ದು ಅದನ್ನು ನಿ ಪಿ 1 ಎಂದು, ಶಮೀನಾ ಷರೀಫ್ ಇವರ ಹೆಸರಿನಲ್ಲಿ ಇರುವ ಒಂದು ಆರ್ ಟಿ ಸಿ ಯನ್ನು ಕೊಟ್ಟಿದ್ದು ಅದನ್ನು  ನಿ ಪಿ 2 ಎಂದು, ಆ ಸ್ವತ್ತಿಗೆ ಸಂಬಂಧಿಸಿದ ಎರಡು ಇ ಸಿ ಗಳನ್ನು ಕೊಟ್ಟಿದ್ದು ಅವುಗಳನ್ನು ನಿ ಪಿ 3 ಮತ್ತು ನಿ ಪಿ 4 ಎಂದು, ಅದೇ ಸ್ವತ್ತಿಗೆ ಸಂಬಂಧಿಸಿದ ಇನ್ನೊಂದು ಆರ್ ಟಿ ಸಿ ಯನ್ನು ಕೊಟ್ಟಿದ್ದು ಅದನ್ನು ನಿಪಿ 5 ಎಂದು, ತಾವರೇಕೆರೆ ಸಬ್ ರಿಜಿಸ್ಟ್ರರ್ ಇವರಿಂದ ಪಡೆದ ಸ್ವತ್ತುಗಳ ಮೌಲ್ಯಮಾಪನ ದಾಖಲೆಯನ್ನು ಕೊಟ್ಟಿದ್ದು ಅದನ್ನು ನಿ ಪಿ 6 ಎಂದು, ಸ್ವತ್ತುಗಳ ಸ್ಕೆಚ್ ಗಳನ್ನು ಕೊಟ್ಟಿದ್ದು ಅವುಗಳನ್ನು ನಿ ಪಿ 7 ರಿಂದ ನಿ ಪಿ 9 ಎಂದು ಗುರುತಿಸಲಾಯಿತು. **ಶಮೀನಾ ಷರೀಫ್ ಇವರ ಸ್ವತ್ತುಗಳನ್ನು ಮಾರಾಟ ಮಾಡಿ ಡಿಕ್ರಿದಾರರಿಗೆ ಕೊಡಬೇಕಾದ ಹಣವನ್ನು ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ.**

**ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**